(ಅ) ಮೇಲಿನ ಪ್ರಕರಣಗಳು ಎಷ್ಟು ವರ್ಷದಿಂದ ಮಂಜೂರಾಗದೆ ಉಳಿದಿದೆ ಮತ್ತು ಇದಕ್ಕೆ ಕಾರಣಗಳೇನು ?

(ಇ) ಈ ಪ್ರಕರಣದ ವಿಲೇವಾರಿಯ ಬಗ್ಗೆ ಸರ್ಕಾರದವರು ಕೈಗೊಂಡಿರುವ ಕ್ರಮಗಳೇನು ?

ಶ್ರೀ ವಿ. ಎಲ್. ಪಾಟೀಲ್ (ಕಂದಾಯ ಮಂತ್ರಿಗಳು).—

(ಅ) ಇಬ್ಬರು ನಿವೃತ್ತ ಅಭ್ಯರ್ಥಿಗಳಿಗೆ ಪರಿಷ್ಕೃತ ವೇತನ ಶ್ರೇಣಿ ಮಂಜೂರಾಗದೆ ಬಾಕಿ ಉಳಿದಿದೆ.

(೧) ಹುಬ್ಬಳ್ಳಿ ತಾಲ್ಲೂಕ್—೧

(೨) ರೋಣ ತಾಲ್ಲೂಕ್—೧

(ಆ) ಮೊದಲನೆಯದಾಗಿ ೨೦ನೇ ಸೆಪ್ಟೆಂಬರ್ ೧೯೬೮ ರಿಂದ ಎ.ದ. ಗುಮಾಸ್ತರಾದ ಶ್ರೀ ಸಿ. ಎಸ್. ರೇಣುಕಾ ಮಠ ಅವರಿಗೆ ಪರಿಷ್ಕೃತ ವೇತನ ಶ್ರೇಣಿಯು ಮಂಜೂರಾಗಿ ಬಾಕಿ ಉಳಿದಿದೆ. ಇದರಂತೆ ೧ನೇ ಏಪ್ರಿಲ್ ೧೯೮೨ ರಿಂದ ಹೆಚ್. ಕೆ. ಮಿರ್ಜಾನವರ್ ಅವರಿಗೆ ಮಂಜೂರಾಗಿಲ್ಲ. ಇದಕ್ಕೆ ಕಾರಣ ಶ್ರೀ ಸಿ. ಎಸ್. ಕೇಣುಕಾ ಮಠ ಅವರ ಹಿಂದಿನ ಮುಂಬಾಯಿ ಸರ್ಕಾರದ ನಾಗರಿಕಾ ಪೂರೈಕೆ ಇಲಾಖೆಯಲ್ಲಿ ಸಲ್ಲಿಸಿದ ಸೇವಾವಧಿಯನ್ನು ಸಕ್ರಮಗೊಳಿಸಬೇಕಾಗಿದ್ದು, ಇದೀಗ ಕ್ರಮಬದ್ಧಗೊಳಿಸ ಬೇಕಾಗಿದೆ, ಮತ್ತು ಇದರಂತೆ ಅವಮಾನತ್ತಿನಲ್ಲಿರುವಾಗ ಶ್ರೀ ಹೆಚ್. ಕೆ. ಮಿರ್ಜಾನವರ್ ಅವರು ನಿವೃತ್ತರಾಗಿರುತ್ತಾರೆ. ಇಲಾಖಾ ವಿಚಾರಣೆಯ ಬಾಕಿಯಿದ್ದು ಇದೀಗ ಇತ್ಯರ್ಥವಾಗಬೇಕಾಗಿದೆ.

(ಇ) ಈ ವಿಷಯದ ಬಗ್ಗೆ ರೋಣ ತಾಲ್ಲೂಕಿನ ತಹಶೀಲ್ದಾರರಿಗೆ ಶ್ರೀ ಸಿ. ಎಸ್. ರೇಣುಕಾ ಮಠ ಅವರ ಬಗ್ಗೆ ವಿಚಾರ ಮಾಡಿ ವಿವರವಾದ ವರದಿಯನ್ನು ಕಳಿಸುವಂತೆ ದಿನಾಂಕ ೧೬ನೇ ಮೇ ೧೯೮೩ರಲ್ಲಿ ಸೂಚನೆ ಕೊಟ್ಟಿದೆ, ಹಾಗೂ ಜಿಲ್ಲಾಧಿಕಾರಿ, ಧಾರವಾಡ, ಅವರು ಶ್ರೀ ಮಿರ್ಜಾನವರ್ ವಿಚಾರದ ಬಗ್ಗೆ ಪರಿಶೀಲಿಸುವರು,

ಹಂನಗುಂದ ತಾಲ್ಲೂಕಿನ ಕಡಿವಾಲ ಗ್ರಾಮಕ್ಕೆ ಬೀದಿ ದೀಪಗಳು

೯೯ ಶ್ರೀ ಮಲ್ಲಿಕಾರ್ಜುನ ವಿ. ಬನ್ನಿ (ಗುಳೇದಗುಡ್ಡ).— ಮಾನ್ಯ ಅಬಕಾರಿ ಮತ್ತು ವಿದ್ಯುಚ್ಛಕ್ತಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೇ ?

(ಅ) ಹುನಗುಂದ ತಾಲ್ಲೂಕಿನ ಕಡಿವಾಳ ಕಲಾಪುರ ಗ್ರಾಮಕ್ಕೆ ದಿನಾಂಕ. ೨೮-೧೨-೮೧ರಂದೆ ಗ್ರಾಮದ ಜನ ಮುಂಖ್ಯ ಮಂತ್ರಿಗಳಿಗೆ ಬೀದಿ ದೀಪಗಳಿಗಾಗಿ ಮನವಿ ಸಲ್ಲಿಸಿದ್ದು ಸರಕಾರ ದವರ ಗಮನಕ್ಕೆ ಬಂದಿದೆಯೆ ?

(ಆ) ಬೀದಿ ದೀಪ ಯೋಜನೆಯನ್ನು ಸರಕಾರದವರು ಕಾರ್ಯಗತ ಮಾಡುವರೇ ?

ಶ್ರೀ ಜೆ. ಎಚ್. ಪಟೇಲ್ (ಅಬ್ಕಾರಿ ಹಾಗೂ ವಿದ್ಯುಚ್ಛಕ್ತಿ ಮಂತ್ರಿಗಳು). —

(ಅ) ಇಲ್ಲ. ಆದರೂ ಕರ್ನಾಟಕ ವಿದ್ಯುತ್ ಮಂಡಳಿಯವರ ಗಮನಕ್ಕೆ ಬಂದಿದೆ.

(ಆ) ಕರ್ನಾಟಕ ವಿದ್ಯುತ್ ಮಂಡಳಿಯು ಕಾರ್ಯಗತ ಮಾಡಲಾಗುತ್ತದೆ.

ಸರಕಾರಿ ಶರಾಬಿನ ಗುಣಮಟ್ಟ ಹಾಗೂ ಚಿಲ್ಲರೆ ಮಾರಾಟದ ಬೆಲೆ ನಿಯಂತ್ರಣದ ಬಗ್ಗೆ

೭೫ ಶ್ರೀ ವಿ. ಎಸ್. ಆಚಾರ್ಯ (ಉಡುಪಿ).— ಮಾನ್ಯ ಅಬಕಾರಿ ಹಾಗೂ ವಿದ್ಯುಚ್ಛಕ್ತಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೇ ?

(ಅ) ಕೃಷಿ ಕಾರ್ಮಿಕರು ಹಾಗೂ ಕೂಲಿಕಾರರೇ ಮುಂತಾದ ಬಡವರು ಹೆಚ್ಚಾಗಿ ಉಪಯೋಗಿ ಸುವ ಸರ್ಕಾರಿ ಶರಾಬಿನ ಗುಣಮಟ್ಟ ಹಾಗೂ ಮಾರಾಟದ ಬೆಲೆ ನಿಗಧಿಗೊಳಿಸುವ ಬಗ್ಗೆ ಸರ್ಕಾರದವರು ನಿಯಂತ್ರಣ ಏನಾದರೂ ಮಾಡಿದ್ದಾರೆಯೇ ?

(ಆ) ಈ ಬಗೆಯ ನಿಯಂತ್ರಣ ಸದ್ಯ ಇಲ್ಲದೆ ಶರಾಬಿನ ಹೆಸರಲ್ಲಿ ಅತಿ ಕೀಳುಮಟ್ಟದ ಅಪಾಯ